1. ಭಾರತೀಯ ರಾಷ್ಟ್ರೀಯ ಚಳುವಳಿಯ ನರ್ಸರಿ ಎಂದು ಪರಿಚಿತವಾಗಿರುವ ಸ್ಥಳ
   A) ಬಿಹಾರ B) ಲಕ್ನೋ C) ಬಂಗಾಳ D) ದೆಹಲಿ

2. ಕೆಳಗೆ ಹೆಸರಿಸಲಾಗಿರುವ ವ್ಯಕ್ತಿಗಳಲ್ಲಿ 'ಹಿತಕಾರಿಣಿ ಸಮಾಜಂ' ಪ್ರಾರಂಭಿಸಿದವರು ಯಾರು ?
   A) ಇ. ವಿ. ರಾಮಸ್ವಾಮಿ ನೈಕರ್ B) ವೀರೇಶಲಿಂಗಂ
   C) ಆತ್ಮಾರಾಂ ಪಾಂಡುರಂಗ D) ಸ್ವಾಮಿ ದಯಾನಂದ ಸರಸ್ವತಿ

3. 1857 ರ ದಂಗೆಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ಯಾವುದು ತಪ್ಪಾಗಿರುತ್ತದೆ ?
   A) ಕಾನ್‌ಪುರ್ – ನಾನಾಸಾಹೇಬ್ B) ಝಾನ್ಸಿ – ರಾಣಿ ಲಕ್ಷ್ಮೀಬಾಯಿ
   C) ಲಕ್ನೋ – ಮೌಲವಿ ಅಹಮ್ಮದುಲ್ಲಾ D) ದೆಹಲಿ – ಬಹಾದ್ದೂರ್ ಶಾ – II

4. ಯಾವ ವರ್ಷದಲ್ಲಿ ಐತಿಹಾಸಿಕ ಲಾಹೋರ್ ಸಮ್ಮೇಳನ ಸಂಭವಿಸಿತು ?
   A) 1928 B) 1929 C) 1930 D) 1927

5. ಭಾರತದಲ್ಲಿ ಪ್ರಥಮ ಮಹಿಳಾ ವಿಶ್ವವಿದ್ಯಾನಿಲಯ ಸ್ಥಾಪಿಸಿದವರು ಯಾರು ?
   A) ಎಂ. ಎ. ಅನ್ಸಾರಿ B) ಡಿ. ಕೆ. ಕಾರ್ವೆ
   C) ಸೈಯ್ಯದ್ ಅಹಮ್ಮದ್ ಖಾನ್ D) ಜಿ. ಜಿ. ಆಗರ್‌ಕರ್

6. ಯಾವ ವರ್ಷದಲ್ಲಿ ಪಾಂಡಿಚೇರಿಯು ಇಂಡಿಯನ್ ಯೂನಿಯನ್‌ನಲ್ಲಿ ವಿಲೀನಗೊಂಡಿತು ?
   A) 1955 B) 1961 C) 1950 D) 1954

7. ಯಾವ ದೇಶದಿಂದ ಭಾರತವು ಆರ್ಥಿಕ ಯೋಜನೆಯ ಪರಿಕಲ್ಪನೆಯನ್ನು ಪಡೆದುಕೊಂಡಿತು ?
   A) ಜಪಾನ್ B) ಬ್ರಿಟನ್
   C) ಅಮೇರಿಕಾ D) ಸೋವಿಯೆತ್ ಯೂನಿಯನ್

8. ಕೆಳಗಿನ ಆಯ್ಕೆಗಳಲ್ಲಿ ಯಾವುದಕ್ಕೆ 'ಆಪರೇಶನ್ ಬ್ಲ್ಯಾಕ್ ಬೋರ್ಡ್' ಕಾರ್ಯಕ್ರಮವು ಸಂಬಂಧಿಸಿದೆ ?
   A) ಡಾ. ರಾಧಾಕೃಷ್ಣನ್ ಆಯೋಗ B) ಮುದಲಿಯಾರ್ ಆಯೋಗ
   C) ಕೊಠಾರಿ ಆಯೋಗ D) ರಾಷ್ಟ್ರೀಯ ಶಿಕ್ಷಣ ನೀತಿ

9. ರಾಷ್ಟ್ರೀಯ ನಾಟಕ ಶಾಲೆ ಇಲ್ಲಿದೆ
   A) ಪೂನಾ B) ನವದೆಹಲಿ C) ಮುಂಬೈ D) ಹೈದರಾಬಾದ್

10. ಭಾರತೀಯ ಬಾಹ್ಯಾಕಾಶ ಸಂಶೋಧನೆ ಸಂಸ್ಥೆಯು ಸ್ಥಾಪನೆಗೊಂಡ ವರ್ಷ
    A) 1962 B) 1969 C) 1968 D) 1970

11. 1897 ರ ಅಮರಾವತಿ ಕಾಂಗ್ರೆಸ್ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಮಲಯಾಳಿ
    A) ಜಿ. ಪಿ. ಪಿಳ್ಳ B) ಕೆ. ಪಿ. ಕೇಶವ ಮೆನನ್ C) ಸಿ. ಶಂಕರನ್ ನಾಯರ್ D) ಕೆ. ಕೇಳಪ್ಪನ್

12. ಕೊಚ್ಚಿಯಲ್ಲಿ ಯಾವ ವರ್ಷ ವಿದ್ಯುಚ್ಛಕ್ತಿ ಹರತಾಳ ಸಂಭವಿಸಿತು ?
A) 1935 B) 1936 C) 1938 D) 1932

13. 'ಪೂಕೊಟ್ಟೂರ್ ಘಟನೆ'ಯು ಕೆಳಗಿನವುಗಳಲ್ಲಿ ಯಾವುದಕ್ಕೆ ಸಂಬಂಧಿಸಿದ್ದಾಗಿರುತ್ತದೆ ?
A) ಕೈಯೂರ್ ಕಲಾಪ B) ಕುರಿಚ್ಯ ಕಲಾಪ
C) ಮಲಬಾರ್ ಕಲಾಪ D) ಪುಣ್ಣಪ್ರ-ವಯಲಾರ್ ಸಮರ

14. ಸಮತ್ವ ಸಮಾಜಂ ಸ್ಥಾಪಿಸಿದವರು ಯಾರು ?
A) ಚಟ್ಟಂಬಿ ಸ್ವಾಮಿಗಳ್ B) ಅಯ್ಯಾಂಕಳಿ
C) ಸಹೋದರನ್ ಅಯ್ಯಪ್ಪನ್ D) ವೈಕುಂಠ ಸ್ವಾಮಿಗಳ್

15. 1921ರ ಕಾಂಗ್ರೆಸ್ ನಾಯಕತ್ವದಡಿಯಲ್ಲಿ, ಯಾವ ಸ್ಥಳದಲ್ಲಿ ಪ್ರಥಮ ಕೇರಳ ರಾಜ್ಯ ರಾಜಕೀಯ ಸಭೆಯನ್ನು ನಡೆಸಲಾಯಿತು ?
A) ಪಯ್ಯನ್ನೂರ್ B) ಒಟ್ಟಪಾಲಮ್ C) ತ್ರಿಶ್ಶೂರ್ D) ಆಲುವ

16. ಭಾರತದ ಸಾಂವಿಧಾನಿಕ ಸಭೆಯ ಅಧ್ಯಕ್ಷರು ಯಾರಾಗಿದ್ದರು ?
A) ಡಾ. ಬಿ. ಆರ್. ಅಂಬೇಡ್ಕರ್ B) ನೆಹರೂ
C) ಡಾ. ರಾಜೇಂದ್ರ ಪ್ರಸಾದ್ D) ಮಹಾತ್ಮ ಗಾಂಧಿ

17. ಭಾರತೀಯ ಸಂವಿಧಾನದ ಪೀಠಿಕೆಯನ್ನು ಹೀಗೆಂದು ಕರೆಯುತ್ತಾರೆ
A) ಸನ್ನದು B) ಪ್ರಸ್ತಾವನೆ C) ಸಂಸತ್ತು D) ಕಾನೂನು ಸಮಿತಿ

18. ಯಾವ ಸಂವಿಧಾನ ತಿದ್ದುಪಡಿಯು ಆಸ್ತಿಯ ಮೂಲಭೂತ ಹಕ್ಕನ್ನು ಮೊಟಕುಗೊಳಿಸಿತು ?
A) 44 B) 25 C) 32 D) 40

19. ಇವರು ಭಾರತೀಯ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಸರಕಾರದ ಮುಖ್ಯಸ್ಥರಾಗಿದ್ದಾರೆ
A) ರಾಷ್ಟ್ರಾಧ್ಯಕ್ಷ B) ಮಂತ್ರಿಗಳು C) ರಾಜ್ಯಪಾಲ D) ಪ್ರಧಾನಮಂತ್ರಿ

20. ನಮ್ಮ ಸಂವಿಧಾನವು ಮೂಲಭೂತ ಕರ್ತವ್ಯಗಳ ಬಗ್ಗೆ ಹೇಳುತ್ತದೆ. ಈಗ ಎಷ್ಟು ಮೂಲಭೂತ ಕರ್ತವ್ಯಗಳು ಇವೆ ?
A) 7 B) 10 C) 11 D) 18

21. ಭಾರತದ ಕ್ಷಿಪಣಿ ಮನುಷ್ಯ ಎಂದು ಯಾರು ಪರಿಚಿತರಾಗಿದ್ದಾರೆ ?
A) ಕೆ. ರಾಧಾಕೃಷ್ಣನ್ B) ತಂಬಿ ನಾರಾಯಣನ್
C) ಡಾ. ಎ. ಪಿ. ಜೆ. ಅಬ್ದುಲ್ ಕಲಾಮ್ D) ವಿಕ್ರಮ್ ಸಾರಾಭಾಯಿ

22. ಭಾರತದಲ್ಲಿ ಬ್ಯಾಂಕರ್‌ಗಳ ಬ್ಯಾಂಕ್ ಎಂದು ಯಾವ ಸಂಘಟನೆಯನ್ನು ಕರೆಯಲಾಗುತ್ತದೆ ?
A) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
B) ಕೆನರಾ ಬ್ಯಾಂಕ್
C) ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ
D) ನೀತಿ ಆಯೋಗ

23. ಭಾರತದ ರಾಷ್ಟ್ರಾಧ್ಯಕ್ಷರು ರಾಜೀನಾಮೆ ನೀಡಿದಾಗ, ನಿಧನರಾದಾಗ ಅಥವಾ ಸಂಸತ್ತಿನಿಂದ ಅವರು ಪದಚ್ಯುತಿಗೊಂಡಾಗ ಅವರ ಹೊಣೆಗಾರಿಕೆಗಳನ್ನು ಯಾರು ವಹಿಸಿಕೊಳ್ಳುತ್ತಾರೆ ?
A) ಚುನಾವಣಾ ಆಯುಕ್ತರು
B) ಪ್ರಧಾನಮಂತ್ರಿ
C) ಸುಪ್ರೀಂ ಕೋರ್ಟಿನ ನ್ಯಾಯಾಧೀಶ
D) ಉಪರಾಷ್ಟ್ರಪತಿಗಳು

24. ಭಾರತದ ಸಂವಿಧಾನದ ನಿರ್ದೇಶಕ ತತ್ವಗಳು ಗಾಂಧಿ ವಿಚಾರಧಾರೆಯ ಯಾವುದನ್ನು ಒಳಗೊಂಡಿದೆ ?
A) ಸಮಾನ ವೇತನ
B) ಏಕರೂಪ ನಾಗರಿಕ ಸಂಹಿತೆ
C) ಗ್ರಾಮ ಪಂಚಾಯತಿಗಳ ಸ್ಥಾಪನೆ
D) ಶೋಷಣೆ ತಡೆಯುವುದು

25. ಪ್ರಪಂಚದಲ್ಲಿ ಪ್ರಜಾಪ್ರಭುತ್ವದನುಸಾರ ಆಯ್ಕೆಯಾದ ಪ್ರಥಮ ಕಮ್ಯುನಿಸ್ಟ್ ಸರಕಾರ ಎಲ್ಲಿತ್ತು ?
A) ರಷ್ಯಾ
B) ಅಮೇರಿಕಾ
C) ಕೇರಳ
D) ಪಶ್ಚಿಮ ಬಂಗಾಲ

26. ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ ?
i. ಹಿಮಾವೃತ ಹಿಮಾಲಯ ಪರ್ವತ ಶ್ರೇಣಿಗಳ ದಕ್ಷಿಣ ಭಾಗ ಪ್ರದೇಶದಲ್ಲಿ ಚಳಿಯ ತೀವ್ರತೆ ಕಡಿಮೆ ಇರುತ್ತದೆ.
ii. ಸುಂದರ ಪ್ರಕೃತಿಯಿಂದೊಡಗೂಡಿದ ಹಿಮಾಲಯ ಪರ್ವತ ಶ್ರೇಣಿಗಳ ದಕ್ಷಿಣ ಭಾಗ ಪ್ರದೇಶದಲ್ಲಿ ಬಹಳಷ್ಟು ಪ್ರವಾಸ ತಾಣಗಳು ಇವೆ.
A) i ಮತ್ತು ii ಸರಿಯಾಗಿದೆ
B) i ಸರಿಯಾಗಿದೆ ii ತಪ್ಪಾಗಿದೆ
C) i ತಪ್ಪಾಗಿದೆ ii ಸರಿಯಾಗಿದೆ
D) i ಮತ್ತು ii ತಪ್ಪಾಗಿದೆ

27. ಭಾರತದ ಅತಿ ಪುರಾತನ ಮತ್ತು ಬಲಿಷ್ಠ ಶಿಲೆಗಳಿಂದ ಉಂಟಾದ ಪ್ರದೇಶಗಳು
A) ಭಾರತದ ಮರುಭೂಮಿ
B) ಕರಾವಳಿ ಸಮತಲ ಪ್ರದೇಶಗಳು
C) ಉತ್ತರ ಮಹಾಸಮತಲ ಪ್ರದೇಶಗಳು
D) ಪರ್ಯಾಯ ದ್ವೀಪ ಪ್ರಸ್ಥಭೂಮಿ

28. ಯಾವ ಭಾರತೀಯ ರಾಜ್ಯವು ನೇಪಾಲದೊಂದಿಗೆ ಕನಿಷ್ಠ ಗಡಿಯನ್ನು ಹಂಚಿಕೊಳ್ಳುತ್ತದೆ ?
A) ಉತ್ತರಪ್ರದೇಶ
B) ಸಿಕ್ಕಿಂ
C) ಬಿಹಾರ
D) ಉತ್ತರಾಖಂಡ್

29. ಭಾರತದ ಮುಂಗಾರು ಕ್ಷೀಣಿಸುತ್ತಿರುವ ಅವಧಿಯಲ್ಲಿ ಯಾವ ರಾಜ್ಯವು ಗರಿಷ್ಠ ಮಳೆಯನ್ನು ಪಡೆಯುತ್ತದೆ ?
A) ಗೋವಾ
B) ಮಹಾರಾಷ್ಟ್ರ
C) ತಮಿಳುನಾಡು
D) ಕರ್ನಾಟಕ

30. ಇಂದ್ರಾವತಿಯು ಯಾವ ನದಿಯ ಉಪನದಿಯಾಗಿದೆ ?
A) ಮಹಾನದಿ
B) ಗೋದಾವರಿ
C) ಕಾವೇರಿ
D) ನರ್ಮದಾ

31. ಕೇರಳದ ಯಾವ ವನ್ಯಜೀವಿ ಅಭಯಾರಣ್ಯವನ್ನು ಮಾರ್ಚ್ 1, 2011 ರಂದು ವನ್ಯಜೀವಿ ಅಭಯಾರಣ್ಯ ಎಂದು ಘೋಷಿಸಲಾಯಿತು ?
A) ಆರಲಮ್ ವನ್ಯಜೀವಿ ಅಭಯಾರಣ್ಯ
B) ಕೊಟ್ಟಿಯೂರ್ ವನ್ಯಜೀವಿ ಅಭಯಾರಣ್ಯ
C) ನೆಯ್ಯಾರ್ ವನ್ಯಜೀವಿ ಅಭಯಾರಣ್ಯ
D) ಮಲಬಾರ್ ವನ್ಯಜೀವಿ ಅಭಯಾರಣ್ಯ

32. ಆನಮುಡಿ ಚೋಲ ರಾಷ್ಟ್ರೀಯ ಉದ್ಯಾನವನವು ಯಾವ ತಾಲೂಕಿನಲ್ಲಿದೆ ?
A) ದೇವಿಕುಲಂ
B) ಪೀರುಮಡ್
C) ತಲಶ್ಶೇರಿ
D) ಉಡುಂಬಾನ್ ಚೋಲ

33. ಕೇರಳದಲ್ಲಿ ಅತಿ ಹೆಚ್ಚು ಗಮನಿಸಲ್ಪಡುವ ಮಣ್ಣಿನ ನಮೂನೆ
A) ಕೆಂಪು ಮಣ್ಣು
B) ಕಪ್ಪು ಮಣ್ಣು
C) ಕೆಂಪು ಕಲ್ಲು ಮಣ್ಣು
D) ಅರಣ್ಯ ಮಣ್ಣು

34. ಕೇರಳದ ರಾಜ್ಯ ಕ್ರೀಡಾ ದಿನ
A) ಸೆಪ್ಟೆಂಬರ್ 13
B) ಆಗಸ್ಟ್ 29
C) ಅಕ್ಟೋಬರ್ 13
D) ಜೂನ್ 23

35. ಮೀನುಗಾರರ ಪುನರ್ವಸತಿಗೆಂದು ಕೇರಳ ಸರಕಾರವು ಹಮ್ಮಿಕೊಂಡ ಪುನರ್ಗೇಹಂ ಯೋಜನೆಯು ಯಾವ ವರ್ಷ ಪ್ರಾರಂಭಗೊಂಡಿತು ?
A) 2020
B) 2021
C) 2018
D) 2019

36. ಕೆಳಗಿನ ಆಯ್ಕೆಗಳಲ್ಲಿ ಯಾವುದು ರಾಜ್ಯ ಸ್ಥಳೀಯ ಸ್ವಯಂ ಸರ್ಕಾರ ವಿಭಾಗಗಳಲ್ಲಿ, ಯೋಜನೆಗಳಲ್ಲಿ ಒಳಗೊಂಡಿಲ್ಲ?
A) KITE
B) ಶುಚಿತ್ವ ಮಿಶನ್
C) KILA
D) ಕುಟುಂಬಶ್ರೀ

37. ಕೇರಳ ಅರಣ್ಯ ಸಂಶೋಧನಾ ಕೇಂದ್ರವು ಎಲ್ಲಿದೆ ?
A) ಪಾಂಬಾಡಿ
B) ಪೀಚ್ಚಿ
C) ಪಾಲೋಡ್
D) ಕುನ್ನಮಂಗಲಂ

38. ಚಾಲಿಯಾರ್ ನದಿಯ ಉಗಮಸ್ಥಾನ ಯಾವುದು ?
A) ನೀಲಗಿರಿಯ ಇಳಂಬಲಾರಿ ಬೆಟ್ಟಗಳು
B) ಪಶ್ಚಿಮ ಘಟ್ಟಗಳ ಆನಮಲ ಬೆಟ್ಟಗಳು
C) ಕರ್ನಾಟಕದ ಬ್ರಹ್ಮಗಿರಿ ಅರಣ್ಯ ಶ್ರೇಣಿ
D) ಪಶ್ಚಿಮ ಘಟ್ಟಗಳ ಶಿವಗಿರಿ ಬೆಟ್ಟಗಳು

39. ಕೇರಳದಲ್ಲಿರುವ ಮೂರನೆಯ ಅತ್ಯಂತ ದೊಡ್ಡ ಜಲವಿದ್ಯುತ್ ಯೋಜನೆ
A) ಶಬರಿಗಿರಿ ಜಲವಿದ್ಯುತ್ ಯೋಜನೆ
B) ಇಡುಕ್ಕಿ ಜಲವಿದ್ಯುತ್ ಯೋಜನೆ
C) ಪಳ್ಳಿವಾಸಲ್ ಜಲವಿದ್ಯುತ್ ಯೋಜನೆ
D) ಕುಟ್ಯಾಡಿ ಜಲವಿದ್ಯುತ್ ಯೋಜನೆ

40. ಚೇಟುವ ಸರೋವರ ಯಾವ ಜಿಲ್ಲೆಯಲ್ಲಿದೆ ?
A) ಕೋಳಿಕ್ಕೋಡ್
B) ತಿರುವನಂತಪುರಂ
C) ತ್ರಿಶ್ಶೂರ್
D) ಕಣ್ಣೂರ್



SEAL

41. ಸರಕಾರಿ ಉದ್ಯೋಗಿಗಳಿಗೆಂದು ಕೇರಳ ಸರಕಾರದಿಂದ ಸಂಯೋಜಿಸಲ್ಪಟ್ಟ ವಿಮೆ ಯೋಜನೆ ಯಾವುದು ?
A) ಮೆಡಿಸೆಪ್ B) ಮೆಡಿಕ್ಲೆಮ್ C) ಮೆಡಿಕೇರ್ D) ಮೆಡಿಹೆಲ್ಪ್

42. ಕೆಳಗಿನವುಗಳಲ್ಲಿ ಯಾವುದು ಒಂದು ಲಸಿಕೆಯಾಗಿರುವುದಿಲ್ಲ?
A) OPU B) BCG C) BCR D) ಪೆಂಟಾವಲೆಂಟ್

43. ಮೆದುಳಿನ ಸಾವಿನ ನಂತರ ಅಂಗಾಂಗ ದಾನ ಮಾಡಲು ಇರುವ ಕೇರಳ ರಾಜ್ಯ ಸರಕಾರದ ಆರೋಗ್ಯ ಯೋಜನೆ ಯಾವುದು ?
A) ಅಮೃತಂ ಆರೋಗ್ಯಂ B) ಸುಕೃತಂ C) ಮೃತಸಂಜೀವಿನಿ D) ಸಾಂತ್ವನಂ

44. ಕೆಳಗಿನವುಗಳಲ್ಲಿ ಯಾವುದು ವೈರಸ್‌ನ ವೈಶಿಷ್ಟ್ಯಕ್ಕೆ ಸಂಬಂಧಿಸಿಲ್ಲ?
A) ಜೀವಕೋಶದ ಹೊರಗೆ ನಿರ್ಜೀವವಾದುದು
B) ಆತಿಥೇಯ ಜೀವಕೋಶದ ಸಂಪನ್ಮೂಲಗಳನ್ನು ಬಳಸಿ ವೃದ್ಧಿಯಾಗುವಂತಹುದು
C) DNA ಮತ್ತು ಪ್ರೊಟೀನ್ ಕೋಟಿಂಗ್ ಇರುವಂತಹುದು
D) ಮನುಷ್ಯರಲ್ಲಿ ಮಾತ್ರ ಕಾಯಿಲೆಯನ್ನು ಅಭಿವೃದ್ಧಿಗೊಳಿಸುವಂತಹುದು

45. ಇತ್ತೀಚೆಗೆ ಚೀನಾದಲ್ಲಿ ಜೀನ್ ಎಡಿಟಿಂಗ್ ನಂತರ ಹುಟ್ಟಿದ ಅವಳಿಗಳು ________ ಕಾಯಿಲೆಗೆ ರೋಗನಿರೋಧಕ ಶಕ್ತಿಯನ್ನು ಹೊಂದಿರುವುದು ಎಂದು ಘೋಷಿಸಲ್ಪಟ್ಟವು.
A) AIDS B) ಕೋವಿಡ್ C) ಕ್ಯಾನ್ಸರ್ D) ಕ್ಷಯ

46. ಯಾವ ವಿಧದ ಜೀವಕೋಶಗಳು ರೋಗಾಣುಗಳನ್ನು ಆವರಿಸಿ ಕೊಲ್ಲುತ್ತವೆ ಮತ್ತು ಮಾನವ ಶರೀರದಲ್ಲಿ ರೋಗನಿರೋಧಕತೆಯನ್ನು ಸುಧಾರಿಸುತ್ತವೆ ?
A) ನ್ಯೂಟ್ರೋಫಿಲ್ ಮತ್ತು ಇಸ್‌ನೋಫಿಲ್
B) ನ್ಯೂಟ್ರೋಫಿಲ್ ಮತ್ತು ಮೊನೋಸೈಟ್
C) ನ್ಯೂಟ್ರೋಫಿಲ್ ಮತ್ತು ಬೆಸೊಫಿಲ್
D) ನ್ಯೂಟ್ರೋಫಿಲ್ ಮತ್ತು ಲಿಂಫೋಸೈಟ್

47. ಕೆಳಗಿನ ಆಯ್ಕೆಗಳಿಂದ ಕಾಯಿಲೆಗಳು ಮತ್ತು ರೋಗಾಣುಗಳ ತಪ್ಪು ಸಂಯುಕ್ತವನ್ನು ಆಯ್ಕೆ ಮಾಡಿರಿ.
A) ರಿಂಗ್‌ವರ್ಮ್ಸ್, ಅಥ್ಲೀಟ್ ಫೂಟ್ – ಫಂಗಸ್
B) ನಿಫಾ, ಇಲಿಜ್ವರ – ವೈರಸ್
C) ಕ್ಷಯ, ಡಿಫ್ತೀರಿಯಾ – ಬ್ಯಾಕ್ಟೀರಿಯಾ
D) ಮಲೇರಿಯಾ, ಕ್ಲೆಮಿಡಿಯಾಸಿಸ್ – ಪ್ರೋಟೋಜ಼ೋವಾ

48. ಕಾಂಡಕೋಶಗಳು ಎಂದರೆ
i. ರಕ್ತದ ಕ್ಯಾನ್ಸರ್ ಇರುವ ಜನರಲ್ಲಿ ಕಂಡುಬರುತ್ತದೆ.
ii. ಮಹಿಳೆಯರಲ್ಲಿ ಮಾತ್ರ ಕಂಡುಬರುತ್ತದೆ.
iii. ಶರೀರದಲ್ಲಿ ಯಾವುದೇ ವಿಧದ ಜೀವಕೋಶಗಳಾಗಬಹುದು.
iv. ಸಸ್ಯಗಳ ಬೀಜಗಳಲ್ಲಿ ಕಂಡುಬರುತ್ತವೆ.
A) i ಮತ್ತು ii B) ii ಮತ್ತು iv C) iii D) ಎಲ್ಲವೂ ಸರಿ ಇವೆ

49. ಕೆಳಗಿನವುಗಳಿಂದ ಸರಿಯಾದ ಆಯ್ಕೆಗಳನ್ನು ಆರಿಸಿರಿ.
   i. ಪ್ರತಿಕಾಯಗಳು ಕೆಲವು ಪ್ರೋಟೀನುಗಳಾಗಿವೆ.
   ii. ಪ್ರತಿಕಾಯಗಳನ್ನು ಇಮ್ಯುನೋಗ್ಲೊಬುಲಿನ್ ಎಂದು ಕರೆಯಲಾಗುತ್ತದೆ.
   iii. ರೋಗ ನಿರೋಧಕತೆಯನ್ನು ಅಭಿವೃದ್ಧಿಪಡಿಸಲು ಶರೀರವು ಲಸಿಕೆಯ ವಿರುದ್ಧ ಪ್ರತಿಕಾಯಗಳನ್ನು ಉಂಟುಮಾಡುತ್ತವೆ.
   iv. ಪ್ರತಿಕಾಯಗಳು ಕೆಲವು ಸೂಕ್ಷ್ಮಜೀವಿಗಳಿಂದ ಹೊರತೆಗೆಯಲಾದ ಔಷಧಿಗಳಾಗಿವೆ.

   A) ii ಮತ್ತು iii   B) i, ii ಮತ್ತು iii   C) ಎಲ್ಲವೂ ಸರಿ   D) i ಮತ್ತು iv

50. ಪಾರ್ಶ್ವವಾಯು (ಸ್ಟ್ರೋಕ್) ಒಂದು ಜೀವನ ಶೈಲಿಯ ರೋಗವಾಗಿರುತ್ತದೆ. ಇದಕ್ಕೆ ಪ್ರಮುಖ ಕಾರಣ ಎಂದರೆ
   i. ಯಕೃತಿನಲ್ಲಿ ಕೊಬ್ಬಿನ ಹೆಚ್ಚಳ.
   ii. ಹೃದಯಾಘಾತ.
   iii. ಮೆದುಳಿಗೆ ರಕ್ತದ ಹರಿವನ್ನು ನಿರೋಧಿಸುತ್ತದೆ.
   iv. ಆಲ್‌ಝೈಮರ್ಸ್ ಕಾಯಿಲೆಯ ಹದಗೆಡುವಿಕೆ.

   A) i ಮತ್ತು ii   B) ii ಮತ್ತು iv   C) iv   D) iii

51. ________ ಎಂದರೆ ಪ್ರಯಾಣಿಕರನ್ನು ಹತ್ತಿಸಲು ಅಥವಾ ಇಳಿಸಲು ಅಥವಾ ಅದರೊಳಗೆ ವಸ್ತುಗಳನ್ನು ಇಡಲು ಅಥವಾ ಕೂಡಲೇ ಅದರಿಂದ ಹೊರತೆಗೆಯಲು ಸ್ವಲ್ಪ ಸಮಯ ವಾಹನವನ್ನು ನಿಲ್ಲಿಸಲಾಗಿದೆ.
   A) ಪಾರ್ಕಿಂಗ್   B) ನಿಲ್ಲಿಸುವುದು (ಸ್ಟಾಪಿಂಗ್)
   C) ತಾತ್ಕಾಲಿಕ ಪಾರ್ಕಿಂಗ್   D) ತಾತ್ಕಾಲಿಕ ಸ್ಟಾಪಿಂಗ್

52. ಮೋಟಾರು ವಾಹನವನ್ನು ಇದರ ಮೂಲಕ ಚಲಾಯಿಸಬೇಕು
   A) ಸಾಗಾಣೆ ದಾರಿ (Carriage way)   B) ರಸ್ತೆ ಬದಿ (Road margin)
   C) ರಸ್ತೆ ಭುಜ (Road shoulder)   D) ಸಂಚಾರ ದ್ವೀಪ (Traffic Island)

53. ಪೊಲೀಸ್ ಅಧಿಕಾರಿಯಿಂದ ಅಥವಾ ಸರಕಾರದಿಂದ ನೇಮಿಸಲ್ಪಟ್ಟ ಇತರ ಯಾವುದೇ ಅಧಿಕಾರಿಯಿಂದ ವಾಹನ ಮುಟ್ಟುಗೋಲು ಹಾಕಲ್ಪಡುವುದಕ್ಕೆ ಮತ್ತು ಕಸ್ಟಡಿಗೆ ತೆಗೆದುಕೊಳ್ಳಲ್ಪಡುವುದಕ್ಕೆ ಕಾರಣವಾಗಬಲ್ಲ ಅಪರಾಧ
   A) ಪರವಾನಿಗೆ ಇಲ್ಲದೆ ಅಥವಾ ವಯಸ್ಕನಾಗುವ ಮೊದಲೇ ಚಲಾಯಿಸುವುದು
   B) ವಾಹನವನ್ನು ನೋಂದಾಯಿಸದೆ ಚಲಾಯಿಸುವುದು
   C) ಅನುಮತಿ ಪತ್ರ (ಪರ್ಮಿಟ್) ಇಲ್ಲದೆ ವಾಹನ ಚಲಾಯಿಸುವುದು
   D) ಮೇಲಿನ ಎಲ್ಲಾ ಅಪರಾಧಗಳೂ

54. ಡ್ರೈವಿಂಗ್ ಲೈಸೆನ್ಸ್‌ನ ಅಮಾನ್ಯೀಕರಣಕ್ಕೆ ಕಾರಣವಾಗಬಲ್ಲ ಅಪರಾಧ
   A) ಪ್ರಯಾಣಿಕರ ಮೇಲೆ ಹಲ್ಲೆ ನಡೆಸುವುದು
   B) ಸರಕು ವಾಹನಗಳ ಓವರ್‌ಲೋಡಿಂಗ್ (ಸಿಕ್ಕಾಪಟ್ಟೆ ಹೇರಿಸಿಕೊಳ್ಳುವುದು)
   C) ಅಧಿಕೃತ ಅಧಿಕಾರಿ ನಿಲ್ಲಿಸಲು ಸಿಗ್ನಲ್ ತೋರಿಸಿದರೂ ವಾಹನ ನಿಲ್ಲಿಸದಿರುವುದು
   D) ಮೇಲಿನ ಎಲ್ಲಾ ಅಪರಾಧಗಳೂ

55. ವೃತ್ತಾಕಾರ ಮತ್ತು ಕೆಂಪು ಅಂಚಿನ ರಸ್ತೆ ಚಿಹ್ನೆಯ ಹೆಸರು
 A) ಎಚ್ಚರಿಕೆ ಚಿಹ್ನೆಗಳು (Cautionary signs)
 B) ಮಾಹಿತಿ ಚಿಹ್ನೆಗಳು (Informatory signs)
 C) ಕಡ್ಡಾಯ ಚಿಹ್ನೆಗಳು (Mandatory signs)
 D) ಸೌಕರ್ಯಗಳಿಗೆ ಸಂಬಂಧಿಸಿದ ಚಿಹ್ನೆಗಳು (Signs related to facilities)

56. ಕೆಳಗೆ ತೋರಿಸಲಾದ ಚಿಹ್ನೆಯು ಏನನ್ನು ಸೂಚಿಸುತ್ತದೆ ?



 A) ಜಾರು ರಸ್ತೆ (Slippery road)
 B) ಸಡಿಲ ಜಲ್ಲಿಕಲ್ಲು (Loose gravel)
 C) ಅಡ್ಡ ರಸ್ತೆ (Cross road)
 D) ಬೀಳುತ್ತಿರುವ ಬಂಡೆಗಳು (Falling rocks)

57. ______________ ಎಂದರೆ ಸಾಗಣೆ ಪಥದಲ್ಲಿ ವಾಹನ ಚಲನೆಗೆ ಸಮಾನಾಂತರವಾಗಿ ರಸ್ತೆ ಚಿಹ್ನೆಗಳನ್ನು ವ್ಯವಸ್ಥೆಗೊಳಿಸಿರುವುದು.
 A) ಉದ್ದುದ್ದ ಗುರುತು ಹಾಕುವುದು (Longitudinal marking)
 B) ಅಡ್ಡಹಾಯುವ ಗುರುತು (Traversed marking)
 C) ಪಾದಚಾರಿ ದಾಟುವ ಗುರುತು (Pedestrian crossing marking)
 D) ನಿಲ್ಲಿಸುವಂತೆ ಗೆರೆ ಎಳೆದ ಗುರುತು (Stop line marking)

58. ಯಾವ ಸನ್ನಿವೇಶಗಳಲ್ಲಿ ವಾಹನವೊಂದು ಎಡಬದಿಯಿಂದ ಹಿಂದಿಕ್ಕಬಹುದು ?
 A) ಬಹುಪಥಗಳಲ್ಲಿ ಚಲಾಯಿಸುವಾಗ
 B) ಹಿಂದಿಕ್ಕಬೇಕಾದ ವಾಹನವು ನಡುರಸ್ತೆಯಿಂದ ಬಲಬದಿಗೆ ತಿರುಗುವಾಗ
 C) ಎದುರಿನ ವಾಹನವು ನಿಲ್ಲಿಸಲ್ಪಟ್ಟಲ್ಲಿ, ಎಡಬದಿಯಿಂದ ಹಿಂದಿಕ್ಕುವುದು ಸುರಕ್ಷಿತ
 D) ಮೇಲಿನ ಎಲ್ಲಾ ದೃಶ್ಯಾವಳಿಗಳು

59. ಯಾವ ಪರಿಸ್ಥಿತಿಯಲ್ಲಿ ವಾಹನವೊಂದು ಇನ್ನೊಂದು ವಾಹನವನ್ನು ಹಿಂದಿಕ್ಕಬಾರದು ?
 A) ಸೇತುವೆಯ ಮೇಲೆ
 B) ಬಹುಪಥದಲ್ಲಿ
 C) ಎದುರು ತಿರುವು ರಸ್ತೆಯು ಗೋಚರಿಸದ ಸಂದರ್ಭ
 D) ಮೇಲಿನ ಎಲ್ಲಾ ಸನ್ನಿವೇಶಗಳಲ್ಲಿ

60. ಒಂದೇ ನಮೂನೆಯ ಎರಡು ರಸ್ತೆಗಳು ಜಂಕ್ಷನ್‌ವೊಂದರಲ್ಲಿ ಸಂಧಿಸಿದಲ್ಲಿ, ಯಾವ ದಿಕ್ಕಿನಿಂದ ಬರುತ್ತಿರುವ ವಾಹನದ ಚಾಲಕನಿಗೆ ದಾರಿಯ ಹಕ್ಕು ಇರುತ್ತದೆ ?
 A) ಬಲಬದಿ
 B) ಎಡಬದಿ
 C) ಎದುರಿನಿಂದ ಬರುವಂಥದ್ದು
 D) ಯಾರಿಗೂ ಆದ್ಯತೆ ಇರುವುದಿಲ್ಲ

61. ಅನಿವಾರ್ಯ ಸನ್ನಿವೇಶವೊಂದರಲ್ಲಿ ಒಂದು ಸುರಂಗದಲ್ಲಿ ವಾಹನ ನಿಲ್ಲಿಸಲ್ಪಟ್ಟಾಗ, ಪ್ರತಿಫಲಿಸುವ ಎಚ್ಚರಿಕೆ ತ್ರಿಕೋನವನ್ನು ವಾಹನದ ಎದುರು ಮತ್ತು ಹಿಂದುಗಡೆ ________ ಮೀಟರ್ ದೂರದಲ್ಲಿ ಇರಿಸಬೇಕು.

A) 15 B) 20 C) 35 D) 50

62. ಜಂಕ್ಷನ್‌ನಿಂದ ಹಿಂದೆ ಮತ್ತು ಮುಂದೆ ವಾಹನವನ್ನು ಪಾರ್ಕ್ ಮಾಡುವಂತಿಲ್ಲವಾದ ಸ್ಥಳದ ಅಂತರವು

A) 25 ಮೀ. B) 50 ಮೀ. C) 100 ಮೀ. D) 150 ಮೀ.

63. ಕೆಳಗೆ ನೀಡಲಾದ ಆಯ್ಕೆಗಳಲ್ಲಿ, ತುರ್ತು ವಾಹನಗಳ ಆದ್ಯತೆ ಯಾವುದು ?

A) ಆಂಬ್ಯುಲೆನ್ಸ್, ಅಗ್ನಿ ಸೇವೆ ವಾಹನ, ಆರಕ್ಷಕ ಸೇವೆ ವಾಹನ

B) ಅಗ್ನಿ ಸೇವೆ ವಾಹನ, ಆರಕ್ಷಕ ಸೇವೆ ವಾಹನ, ಆಂಬ್ಯುಲೆನ್ಸ್

C) ಅಗ್ನಿ ಸೇವೆ ವಾಹನ, ಆಂಬ್ಯುಲೆನ್ಸ್, ಆರಕ್ಷಕ ಸೇವೆ ವಾಹನ

D) ಆಂಬ್ಯುಲೆನ್ಸ್, ಆರಕ್ಷಕ ಸೇವೆ ವಾಹನ, ಅಗ್ನಿ ಸೇವೆ ವಾಹನ

64. ವಾಹನವನ್ನು ಕಟ್ಟಿ ಎಳೆದೊಯ್ಯುವಾಗ, ಗರಿಷ್ಠ ವೇಗ ಮಿತಿಯು ಪ್ರತಿ ಗಂಟೆಗೆ ________ ಕ್ಕಿಂತ ಹೆಚ್ಚಿರಬಾರದು.

A) 15 ಕಿ.ಮೀ. B) 25 ಕಿ.ಮೀ. C) 35 ಕಿ.ಮೀ. D) 50 ಕಿ.ಮೀ.

65. ಕೇರಳದಲ್ಲಿ ಚತುಷ್ಪಥ ರಸ್ತೆಯೊಂದರಲ್ಲಿ ಮೋಟಾರು ಕಾರಿಗೆ ಅವಕಾಶವಿರುವ ಗರಿಷ್ಠ ವೇಗ, ಗಂಟೆಯೊಂದಕ್ಕೆ ________ ಕಿ.ಮೀ.

A) 60 B) 70 C) 80 D) 90

66. ಸಾರ್ವಜನಿಕ ಸೇವಾ ವಾಹನವೊಂದರಲ್ಲಿ ಅವಕಾಶವಿರುವ ಗರಿಷ್ಠ ಪ್ರಮಾಣದ ಸ್ಫೋಟಕಗಳು


A) 1 ಲೀ. B) 3 ಲೀ. C) 5 ಲೀ. D) ಅವಕಾಶವಿಲ್ಲ

67. ಮಂಜು ದೀಪವು (fog lamp) ________ ನ ಜೊತೆಗೆ ಮಾತ್ರ ಉಪಯೋಗಿಸಬೇಕು.

A) ಕಡಿಮೆ ಮಾಡಿದ ಹೆಡ್‌ಲೈಟ್ (Dipped head light) B) ಹೆಚ್ಚು ಕಿರಣದ ಬೆಳಕು (High beam)

C) ಹೆಚ್ಚುವರಿ ಬೆಳಕು (Extra light) D) ಸ್ಪಾಟ್ ಲೈಟ್ (Spot light)

68. ಕೆಳಗೆ ತೋರಿಸಲಾದ ಚಿಹ್ನೆಯು ಏನನ್ನು ಸೂಚಿಸುತ್ತದೆ ?



A) ನಿಲುಗಡೆ ಇಲ್ಲ B) ನಿಲ್ಲಿಸುವಿಕೆ ಇಲ್ಲ

C) ನಿರ್ಬಂಧಿತ ಪ್ರದೇಶ ಪೂರ್ತಿಗೊಂಡಿತು D) ನಿರ್ಬಂಧಗಳು ಪ್ರಾರಂಭ

69. BS 4 ಸ್ಟ್ಯಾಂಡರ್ಡ್ ಎಂಜಿನ್ ಅಳವಡಿಸಿರುವ ವಾಹನವೊಂದರ ಹೊಗೆ ತಪಾಸಣಾ ಪ್ರಮಾಣಪತ್ರದ ಕಾಲಾವಧಿ
   A) 2 ವರ್ಷಗಳು
   B) 1 ವರ್ಷ
   C) 6 ತಿಂಗಳುಗಳು
   D) 3 ತಿಂಗಳುಗಳು


70. ಬಾಡಿಗೆಗಾಗಲಿ ಅಥವಾ ಆದಾಯಕ್ಕಾಗಲಿ, ಸರಕು ವಾಹನವೊಂದರಲ್ಲಿ ಎಷ್ಟು ಪ್ರಯಾಣಿಕರಿಗೆ ಪ್ರಯಾಣಿಸಲು ಅವಕಾಶವಿದೆ ?
   A) ಯಾರಿಗೂ ಇಲ್ಲ
   B) RC ಪುಸ್ತಕದಲ್ಲಿ ಉಲ್ಲೇಖಿಸಲಾದ ಸಂಖ್ಯೆಯ ಪ್ರಯಾಣಿಕರು
   C) ಇಬ್ಬರಿಗೆ
   D) ಮೂವರಿಗೆ

71. ಸಾಗಣೆ ವಾಹನವೊಂದರ ಪರವಾನಿಗೆ ಸಿಂಧುತ್ವದ ಅವಧಿ
   A) 1 ವರ್ಷ
   B) 2 ವರ್ಷಗಳು
   C) 3 ವರ್ಷಗಳು
   D) 5 ವರ್ಷಗಳು

72. ಕೆಳಗೆ ಹೇಳಿದ ಸಂದರ್ಭಗಳಲ್ಲಿ, ರಾತ್ರಿ ಸಮಯದಲ್ಲಿ ಹೈ ಬೀಮ್ ಬಳಕೆ ನಿಷೇಧಿತವಾಗಿರುವುದು
   A) ವಾಹನವೊಂದು ರಸ್ತೆಯ ಎದುರು ಭಾಗದಲ್ಲಿ ಸಮೀಪಿಸುತ್ತಿರುವಾಗ
   B) ಮತ್ತೊಂದು ವಾಹನವನ್ನು ಅನುಸರಿಸುತ್ತಿರುವಾಗ
   C) ಸುಪ್ರಕಾಶಮಯ ರಸ್ತೆಯೊಂದರಲ್ಲಿ ಪ್ರಯಾಣಿಸುವಾಗ
   D) ಮೇಲೆ ಹೇಳಿದ ಎಲ್ಲಾ ಸನ್ನಿವೇಶಗಳಲ್ಲಿ

73. ವಾಹನ ಸಂಚಾರವನ್ನು ನಿಯಂತ್ರಿಸಲು ಜಂಕ್ಷನ್‌ವೊಂದರಲ್ಲಿ ಮಾಡಲ್ಪಟ್ಟ ಮಾರ್ಕಿಂಗ್ ಅಥವಾ ಕನ್‌ಸ್ಟ್ರಕ್ಷನ್ ವ್ಯವಸ್ಥೆಯನ್ನು ಹೀಗೆನ್ನುತ್ತಾರೆ
   A) ರೌಂಡ್ ಅಬೌಟ್
   B) ಟ್ರಾಫಿಕ್ ಐಲ್ಯಾಂಡ್
   C) ರೋಡ್ ಮಾರ್ಕಿಂಗ್
   D) ಹಜಾರ್ಡ್ ಮಾರ್ಕಿಂಗ್

74. ಕೆಳಗೆ ನೀಡಲಾದ ಚಿಹ್ನೆಯು ಏನನ್ನು ಸೂಚಿಸುತ್ತದೆ ?



   A) ಪ್ರಥಮ ಚಿಕಿತ್ಸೆ ಪೋಸ್ಟ್
   B) ಆಸ್ಪತ್ರೆ
   C) ತಿರುವು ರಸ್ತೆ
   D) ಜಂಕ್ಷನ್

75. ವಾಹನವನ್ನು ಎಡಗಡೆ ತಿರುಗಿಸಲು ಕೈ-ಸಂಕೇತ ಹೇಗಿರಬೇಕು ?
A) ಹೊರಗೆ ಚಾಚಿರುವ ಬಲಗೈ
B) ಹೊರಗೆ ಚಾಚಿರುವ ಎಡಗೈ
C) ಹೊರಗೆ ಬಲಗೈ ಚಾಚಿ, ಗಡಿಯಾರದ ವಿರುದ್ಧ ನಡೆಯಲ್ಲಿ ಸುತ್ತುವುದು
D) ಹೊರಗೆ ಬಲಗೈ ಚಾಚಿ, ಗಡಿಯಾರ ಚಲನೆ ರೀತಿ ಸುತ್ತುವುದು

76. ಲಘು ಮೋಟಾರು ವಾಹನ ಎಂದರೆ
A) ವಾಹನದ ಒಟ್ಟು ತೂಕವು 3000 ಕೆ.ಜಿ. ಮೀರಬಾರದು
B) ವಾಹನದ ಒಟ್ಟು ತೂಕವು 5000 ಕೆ.ಜಿ. ಮೀರಬಾರದು
C) ವಾಹನದ ಒಟ್ಟು ತೂಕವು 7500 ಕೆ.ಜಿ. ಮೀರಬಾರದು
D) ವಾಹನದ ಒಟ್ಟು ತೂಕವು 10,000 ಕೆ.ಜಿ. ಮೀರಬಾರದು

77. ವಾಹನ ಚಾಲನೆ ಪರವಾನಿಗೆಗೆ ಯಾವ ನಮೂನೆಯನ್ನು ಬಳಸಲಾಗುತ್ತದೆ ?
A) ನಮೂನೆ 1
B) ನಮೂನೆ 2
C) ನಮೂನೆ 3
D) ನಮೂನೆ 4

78. ಸಾಗಣೆ ವಾಹನವನ್ನು ಚಲಾಯಿಸಲು ಲರ್ನರ್ ಲೈಸೆನ್ಸ್‌ನ ಅನುಮತಿ ಪಡೆಯಲು ಒಬ್ಬನಿಗೆ ಲಘು ಮೋಟಾರು ವಾಹನವೊಂದನ್ನು ಚಲಾಯಿಸಿದ ಕನಿಷ್ಠ ಅನುಭವವಿರಬೇಕು. ಆ ಕನಿಷ್ಠ ಅನುಭವದ ಅವಧಿ ಎಷ್ಟು ?
A) 3 ತಿಂಗಳುಗಳು
B) 6 ತಿಂಗಳುಗಳು
C) 1 ವರ್ಷ
D) 3 ವರ್ಷಗಳು

79. ಸಾಗಣೆ ವಾಹನ ಚಲಾಯಿಸಲು ಪರವಾನಿಗೆ ಪಡೆಯಲು ಕನಿಷ್ಠ ವಯಸ್ಸಿನ ಅವಶ್ಯಕತೆ
A) 18 ವರ್ಷಗಳು
B) 20 ವರ್ಷಗಳು
C) 22 ವರ್ಷಗಳು
D) 24 ವರ್ಷಗಳು

80. ಸರಕು ವಾಹನಗಳ ಮುಂದೆ ಅಳವಡಿಸಿರುವ ಟಾಪ್‌ಲೈಟ್‌ಗಳ ಬಣ್ಣ
A) ಬಿಳಿ
B) ಹಳದಿ
C) ಹಸಿರು
D) ಕೆಂಪು

81. ಶ್ವಾಸ ವಿಶ್ಲೇಷಕದೊಂದಿಗೆ ಪರೀಕ್ಷಿಸಿದಾಗ ರಕ್ತದಲ್ಲಿ ಮದ್ಯವು ______ ಗಿಂತ ಜಾಸ್ತಿ ತೋರಿಸಿದಲ್ಲಿ, ಆಗ ಚಾಲಕನು ಮದ್ಯವನ್ನು ಸೇವಿಸಿದ್ದಾನೆಂದು ತಿಳಿಯಲಾಗುತ್ತದೆ.
A) 30 mg/100 ml.
B) 28 mg/100 ml.
C) 25 mg/100 ml.
D) 20 mg/100 ml.

82. ಡ್ರೈವಿಂಗ್ ಲೈಸೆನ್ಸ್ ಮುಕ್ತಾಯಗೊಳ್ಳುವ ಎಷ್ಟು ದಿನಗಳ ಮುಂಚಿತವಾಗಿ ಅದನ್ನು ನವೀಕರಿಸಬಹುದಾಗಿದೆ ?

A) ಮುಕ್ತಾಯದ ಮೊದಲು ನವೀಕರಿಸುವಂತಿಲ್ಲ

B) ಒಂದು ತಿಂಗಳು

C) 5 ವರ್ಷಗಳು

D) 1 ವರ್ಷ

83. ________ ನಮೂನೆ ಮಾಲಿನ್ಯ ನಿಯಂತ್ರಣದಲ್ಲಿದೆ ಎಂಬ ಪ್ರಮಾಣಪತ್ರವನ್ನು ನೀಡುತ್ತದೆ.

A) ನಮೂನೆ 40
B) ನಮೂನೆ 51

C) ನಮೂನೆ 59
D) ನಮೂನೆ 59-A

84. ಸಂಚಾರ (ಟ್ರಾಫಿಕ್) ಎಂಬ ಪದದ ಅರ್ಥವೇನು ?

A) ಎಲ್ಲಾ ನಮೂನೆಯ ವಾಹನಗಳು

B) ಪಾದಚಾರಿಗಳು

C) ಒಟ್ಟುಗೂಡಿ ಅಥವಾ ಏಕಾಂಗಿಯಾಗಿ ಸಂಚರಿಸುತ್ತಿರುವ ಪ್ರಾಣಿಗಳು

D) ಮೇಲಿನ ಎಲ್ಲಾ ಆಯ್ಕೆಗಳು

85. ಭಾರತ್ ಸ್ಟೇಜ್ VI (BS VI) ಗುಣಮಟ್ಟದನ್ವಯ ತಯಾರಾದ ವಾಹನವೊಂದಕ್ಕೆ ಹೊಗೆ ಮಾಲಿನ್ಯ ನಿಯಂತ್ರಣ ಪ್ರಮಾಣ ಪತ್ರದ ಸಿಂಧುತ್ವ ಅವಧಿ

A) 6 ತಿಂಗಳುಗಳು
B) ಒಂದು ವರ್ಷ

C) 18 ತಿಂಗಳುಗಳು
D) ಎರಡು ವರ್ಷಗಳು

86. ಪ್ರವಾಹ ಮಾಪಕ (Flood gauge) ಚಿಹ್ನೆಯು ಒಂದು ________ ಆಗಿರುತ್ತದೆ.

A) ಮಾಹಿತಿ ಚಿಹ್ನೆ
B) ನಿಯಂತ್ರಕ ಚಿಹ್ನೆ

C) ಎಚ್ಚರಿಕೆ ಚಿಹ್ನೆ
D) ನದಿಯಲ್ಲಿರುವ ಒಂದು ಚಿಹ್ನೆ

87. ಕೆಳಗೆ ತೋರಿಸಲಾದ ಚಿಹ್ನೆಯು ಏನನ್ನು ಸೂಚಿಸುತ್ತದೆ ?




A) ಉದ್ದದ ಮಿತಿ
B) ಅಗಲದ ಮಿತಿ

C) ತೂಕದ ಮಿತಿ
D) ಎತ್ತರದ ಮಿತಿ

88. ಚಾಲಕನಾಗಿ ನೀವು ಒಂದು ಜಂಕ್ಷನನ್ನು ಪ್ರವೇಶಿಸುವಾಗ, ನಿಮ್ಮ ಎದುರಿನಲ್ಲಿ 'ಗೀವ್ ವೇ' ಸೂಚನಾ ಫಲಕವನ್ನು ನೋಡುತ್ತೀರಿ. ಇದರಿಂದ ನೀವು ಯಾವ ಸೂಚನೆಯನ್ನು ಪಡೆದುಕೊಳ್ಳುತ್ತೀರಿ ?

A) ಪಾದಚಾರಿಗಳು ಬದಿ ಬಿಟ್ಟುಕೊಡಬೇಕು

B) ನಾನು ಬೇರೆ ವಾಹನಗಳಿಗೆ ದಾರಿ ಬಿಟ್ಟುಕೊಡಬೇಕು

C) ಬೇರೆ ವಾಹನಗಳು ನನಗೆ ದಾರಿ ಬಿಟ್ಟುಕೊಡಬೇಕು

D) ಜಂಕ್ಷನ್ ಪ್ರವೇಶಿಸುವ ನಿಮಗೆ ಆದ್ಯತೆ

89. ಕೇರಳದಲ್ಲಿ ಶಾಲೆಯೊಂದರ ಬಳಿ ಮೋಟಾರ್ ವಾಹನಗಳ ವೇಗವು ಪ್ರತಿ ಗಂಟೆಗೆ ________ ಎಂದು ನಿಗದಿಪಡಿಸಲಾಗಿದೆ.

A) 30 ಕಿ. ಮೀ. B) 40 ಕಿ. ಮೀ. C) 50 ಕಿ. ಮೀ. D) 60 ಕಿ. ಮೀ.

90. ಖಾಸಗಿ ಮೋಟಾರ್ ಕಾರುಗಳ 15 ವರ್ಷಗಳ ಬಳಕೆಯ ಅನಂತರದ 5 ವರ್ಷಗಳಿಗೆ ಹಸಿರು ತೆರಿಗೆ (Green tax) ಎಷ್ಟಾಗುತ್ತದೆ ?

A) ರೂ. 400 B) ರೂ. 500 C) ರೂ. 600 D) ರೂ. 700

91. ವಾಹನಗಳು ಸುಲಭವಾಗಿ ಚಲಿಸಲು ರಸ್ತೆಗಳು ಸಾಕಷ್ಟು ಅಗಲವಿಲ್ಲದಿರುವ, ಇಳಿಜಾರು ರಸ್ತೆ ಮತ್ತು ಗುಡ್ಡಪ್ರದೇಶಗಳಲ್ಲಿ ಯಾವ ವಾಹನಕ್ಕೆ ಆದ್ಯತೆಯನ್ನು ಕೊಡಬೇಕು ?

A) ಕೆಳಗೆ ಇಳಿಯುತ್ತಿರುವ ವಾಹನ

B) ಮೇಲೆ ಏರುತ್ತಿರುವ ವಾಹನ

C) ಸಣ್ಣ ವಾಹನ

D) ದೊಡ್ಡ ವಾಹನ

92. ರೈಲ್ವೆ ಎಂಜಿನೊಂದರ ಚಿತ್ರವು ತ್ರಿಕೋನ ಎಚ್ಚರಿಕೆ ಚಿಹ್ನೆಯಲ್ಲಿದ್ದರೆ ನೀವು ಏನೆಂದು ಅರ್ಥ ಮಾಡಿಕೊಳ್ಳಬೇಕು ?

A) ಭದ್ರತಾ ಸಿಬ್ಬಂದಿ ಇಲ್ಲದ ರೈಲ್ವೆ ತಿರುವೊಂದು ಮುಂದಿದೆ

B) ಭದ್ರತಾ ಸಿಬ್ಬಂದಿ ಇರುವ ರೈಲ್ವೆ ತಿರುವೊಂದು ಮುಂದಿದೆ

C) ರೈಲ್ವೆ ನಿಲ್ದಾಣವೊಂದು ಹತ್ತಿರದಲ್ಲಿದೆ

D) ರೈಲ್ವೆ ಎಂಜಿನ್‌ನ ದುರಸ್ತಿ ಯಾರ್ಡ್ ಹತ್ತಿರದಲ್ಲಿದೆ

93. ವಾಹನವೊಂದರ ಹಿಂಭಾಗದಲ್ಲಿ ಬಳಕೆಯಾಗುವ ಪ್ರತಿಫಲಿಸುವ ಟೇಪ್‌ನ ಬಣ್ಣವು

A) ಬಿಳಿ

B) ಹಳದಿ

C) ಕೆಂಪು

D) ಕಿತ್ತಳೆ ಹಳದಿ (ಆ್ಯಂಬರ್ ಬಣ್ಣ)

94. ತನ್ನ ವಾಹನವೊಂದರಿಂದ ಅಪಘಾತಕ್ಕೊಳಗಾಗಿ ಯಾರಾದರೂ ಗಾಯಗೊಂಡಲ್ಲಿ, ವಾಹನ ಚಾಲಕನು ಇದನ್ನು ಆದಷ್ಟು ಬೇಗ ________ ಗಂಟೆಗಳ ಒಳಗೆ ಹತ್ತಿರದ ಆರಕ್ಷಕ ಠಾಣೆಯಲ್ಲಿ ವರದಿ ಮಾಡಬೇಕು.

A) 3 B) 6 C) 12 D) 24

95. ಮದ್ಯಪಾನ ಮಾಡಿ ವಾಹನ ಚಲಾಯಿಸುವುದು
A) ಕೇವಲ ದಂಡದೊಂದಿಗೆ ಶಿಕ್ಷಿಸಬೇಕಾದ ಅಪರಾಧ
B) ಕೇವಲ ಸೆರೆವಾಸದೊಂದಿಗೆ ಶಿಕ್ಷಿಸಬೇಕಾದ ಅಪರಾಧ
C) ದಂಡ ಮತ್ತು ಸೆರೆವಾಸದೊಂದಿಗೆ ಶಿಕ್ಷಿಸಬೇಕಾದ ಅಪರಾಧ
D) ದಂಡ, ಸೆರೆವಾಸ ಮತ್ತು ಪರವಾನಿಗೆ ರದ್ಧತಿಯೊಂದಿಗೆ ಶಿಕ್ಷಿಸಬೇಕಾದ ಅಪರಾಧ

96. ಮೋಟಾರು ವಾಹನವೊಂದರ ಮಾಲೀಕತ್ವವನ್ನು ವರ್ಗಾಯಿಸಲು ಬಳಸಬೇಕಾದ ನಮೂನೆ
A) ನಮೂನೆ 25, ನಮೂನೆ 26
B) ನಮೂನೆ 27, ನಮೂನೆ 28
C) ನಮೂನೆ 29, ನಮೂನೆ 30
D) ನಮೂನೆ 35, ನಮೂನೆ 36

97. ನೀವು ವಾಹನವೊಂದರ ಹಿಂದೆ ಚಲಾಯಿಸುವಾಗ ಎಷ್ಟು ಅಂತರವನ್ನು ಕಾಯ್ದುಕೊಳ್ಳಬೇಕು ?
A) ಕಾರೊಂದರ ಉದ್ದಕ್ಕೆ ಸಮಾನವಾಗುವಷ್ಟು ಅಂತರ
B) 2 ಕಾರುಗಳ ಉದ್ದಕ್ಕೆ ಸಮಾನವಾಗುವಷ್ಟು ಅಂತರ
C) ಎದುರಿನ ವಾಹನವು ಹಠಾತ್ ಬ್ರೇಕ್‌ನೊಂದಿಗೆ ನಿಂತರೂ, ನಿಮ್ಮ ವಾಹನವನ್ನು ಸುರಕ್ಷಿತವಾಗಿ ನಿಲ್ಲಿಸಲು ಅವಕಾಶವಿರುವಷ್ಟು ಅಂತರ
D) ಎದುರಿನಲ್ಲಿರುವ ವಾಹನದ ಹಿಂದಿನ ಚಕ್ರಗಳು (ಟಯರ್‌ಗಳು) ಗೋಚರಿಸುವಷ್ಟು ಅಂತರ

98. ನೀಲಿ ಬಣ್ಣದ ವೃತ್ತಾಕಾರದ ಮೇಲ್ಮೈಯಲ್ಲಿ ಬಿಳಿ ಬಣ್ಣದ ಹಾರ್ನ್‌ನ ಚಿಹ್ನೆ ಇರುವ ರೋಡ್ ಸೈನ್ ಬೋರ್ಡನ್ನು ನೋಡಿದಾಗ, ಅರ್ಥವಾಗುವುದು
A) ಹಾರ್ನನ್ನು ಬಳಸಬೇಡಿ
B) ಹಾರ್ನನ್ನು ಬಳಸಲೇಬೇಕು
C) ಏರ್ ಹಾರ್ನ್ ಬಳಕೆಯನ್ನು ನಿಷೇಧಿಸಲಾಗಿದೆ
D) ಮೌನ ವಲಯ

99. ವಾಹನವೊಂದರಲ್ಲಿ ಒದಗಿಸಲಾದ ಪ್ರತಿಫಲನವಾಗುವ ಎಚ್ಚರಿಕೆ ತ್ರಿಕೋನವನ್ನು ಈ ಸಂದರ್ಭದಲ್ಲಿ ಉಪಯೋಗಿಸಬೇಕು
A) ವಾಹನವನ್ನು ಪಾರ್ಕ್ ಮಾಡಿದಾಗ
B) ಕೆಟ್ಟುಹೋದ ಪ್ರಯುಕ್ತ ರಸ್ತೆಯಲ್ಲಿ ವಾಹನವನ್ನು ಪಾರ್ಕ್ ಮಾಡಿದಾಗ
C) ಮಳೆಯಿಂದಾಗಿ ವಾಹನವನ್ನು ಪಾರ್ಕ್ ಮಾಡಿದಾಗ
D) ರಾತ್ರಿಯಲ್ಲಿ ವಾಹನವನ್ನು ಪಾರ್ಕ್ ಮಾಡಿದಾಗ

100. ವಾಹನದ ಅಪಾಯ ಎಚ್ಚರಿಕೆಯ ದೀಪವನ್ನು ಯಾವಾಗ ಬೆಳಗಿಸಬೇಕು ?
A) ಜಂಕ್ಷನ್ ಒಂದರಲ್ಲಿ ನೇರವಾಗಿ ಪ್ರಯಾಣಿಸುವಾಗ
B) ವಾಹನವನ್ನು ಕಟ್ಟಿ ಎಳೆದೊಯ್ಯುವಾಗ
C) ಕೆಟ್ಟು ಹೋದ ಪರಿಣಾಮವಾಗಿ ವಾಹನವನ್ನು ರಸ್ತೆಯಲ್ಲಿ ಪಾರ್ಕ್ ಮಾಡಿದಾಗ
D) ಮಳೆಯಲ್ಲಿ ವಾಹನವನ್ನು ಚಲಾಯಿಸುವಾಗ